79 ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ.ಲೇಔಟ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 4 ಸ್ಟ್ರೋಕ್ ಆಟೋರಿಕ್ಷಾಗಳ ಸಂಖ್ಯೆ ಎಷ್ಟು;

ಆ) ಇವುಗಳನ್ನು 2 ಸ್ಟ್ರೋಕ್ ಆಟೋಗಳಾಗಿ ಪರಿವರ್ತಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆಯೇ;

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಈ) ಈ ರೀತಿಯ ಪರಿವರ್ತನೆಗಾಗಿ ತಗಲುವ ವೆಚ್ಚವೆಷ್ಟು;

ಉ) ಸರ್ಕಾರ ಇದಕ್ಕಾಗಿ ನೀಡುವ ಸಬ್ಸಿಡಿ ಹಣವೆಷ್ಟು;

ಊ) ಈ ಪರಿವರ್ತನೆಗಾಗಿ ನಿಗದಿಪಡಿಸಿರುವ ಕಾಲಾವಧಿ ಎಷ್ಟು;

ಋ) ಈ ಅವಧಿಯೊಳಗೆ ಸರ್ಕಾರ ಎಲ್ಲಾ ಆಟೋರಿಕ್ಷಾದವರಿಗೆ ಸಬ್ಸಿಡಿ ನೀಡುತ್ತದೆಯೇ; ಅಥವಾ ಇದಕ್ಕೆ ಬದಲಾಗಿ ತಗಲುವ ಪೂರ್ತಿ ವೆಚ್ಚವನ್ನು ಸರ್ಕಾರ ಭರಿಸುತ್ತದೆಯೇ?

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು) :

ಅ) ಸುಮಾರು 30,000

ಆ) ಇಲ್ಲ

ಇ) ಅನ್ವಯಿಸುವುದಿಲ್ಲ.

ಈ) ಪರಿವರ್ತಿಸಲು ತಾಂತ್ರಿಕವಾಗಿ ಸಾಧ್ಯವಿಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಅನ್ವಯಿಸುವುದಿಲ್ಲ.

ಋ) ಅನ್ವಯಿಸುವುದಿಲ್ಲ.

788 ಶ್ರೀ ಮಾನಪ್ಪ ವಜ್ಜಲ್ (ಲಿಂಗಸುಗೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸುಗೂರು ತಾಲ್ಲೂಕಿನ ಡಿವೈಎಸ್‌ಪಿ ವಿಭಾಗ ಕಛೇರಿಯು ಬ್ರಿಟಿಷ್ ಕಾಲದ ಕಟ್ಟಡದಲ್ಲಿ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನೂತನ ಕಟ್ಟಡವನ್ನು ಮಂಜೂರು ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ?